ತಾಯಿಗೆ ವಿವರಿಸಿದೆ. ಅಪ್ಪ ಏನನ್ನೂ ಮಾತನಾಡಲಿಲ್ಲ. ನನ್ನ ದೈಹಿಕ ಸ್ಥಿತಿಯನ್ನು ನೋಡಿ ತಾಯಿ ಕಣ್ಣೀರು ಸುರಿಸಿದರು. ಅಪ್ಪ-ಅಮ್ಮ ನನ್ನನ್ನು ಪುನಃ ಗಂಡನ ಮನೆಗೆ ಕಳುಹಿಸಲು ಐದಾರು ತಿಂಗಳು ಎಳೆದಾಡಿದರು. ಅದೂ ಸಾಧ್ಯವಾಗಲಿಲ್ಲ. ನನ್ನ ಕುಟುಂಬದವರು ಹೆಚ್ಚು ವಾದ-ವಿವಾದಗಳಿಗೆ ಹೋಗಲಿಲ್ಲ. ಕೊನೆಗೆ 'ನಿನಗೆ ಇಷ್ಟವಾದ ಹುಡುಗನೊಡನೆ ಇನ್ನೊಂದು ಮದುವೆ ಮಾಡಿಕೋ' ಎಂದು ನನಗೇ ಸ್ವಾತಂತ್ರ್ಯ ನೀಡಿದರು. ಗಂಡಿನ ಅಹಂಕಾರಪೂರಿತ ನಡವಳಿಕೆಗಳ ಅರಿವಿದ್ದುದ್ದರಿಂದ ನನ್ನ ಮನಸ್ಸು ಮರುವಿವಾಹಕ್ಕೆ ಒಪ್ಪಲಿಲ್ಲ. ಕೊನೆಗೆ ನಾನೇ ದೃಢ ನಿರ್ಧಾರಮಾಡಿ ಗಂಡನಿಗೆ ವಿಚ್ಛೇದನ ಕೊಟ್ಟೆ.

ತನ್ನ ಮಗಳ ಬಾಳು ಹೀಗಾಯಿತಲ್ಲ ಎಂದು ಅಪ್ಪ ಒಳಗೊಳಗೇ ಬೇಯುತ್ತಿದ್ದುದು ನನಗೆ ಗೊತ್ತಾಗುತ್ತಿತ್ತು. ಇದೇ ನೋವಿನಲ್ಲಿ ಅಪ್ಪ ತೀರಿಕೊಂಡರು. ಈಗ ಬದುಕನ್ನು ಎಲ್ಲಿಂದ ಆರಂಭಿಸಲಿ ಎಂದು ಗೊಂದಲಕ್ಕೊಳಗಾದೆ. ಮನಸ್ಸಿನ ಮೇಲೆ ಆಳವಾದ ಗಾಯವಾಗಿತ್ತು. ದೇಹದ ಮೇಲಿನ ಗಾಯಗಳೇನೋ ಕ್ರಮೇಣ ಮಾಗಿತ್ತು! ಆದರೆ ನನ್ನ ನೋವು ಮಾತ್ರ ಒಳಗೇ ಉಳಿದಿತ್ತು. ಈ ನೋವುಗಳನ್ನೆಲ್ಲಾ ಮರೆಯಲು ಆಗ ನಾನು ಓದಿನ ಲೋಕಕ್ಕೆ ಪ್ರವೇಶಿಸಿದೆ. ಬತ್ತಿಹೋಗಿದ್ದ ನನ್ನ ಆಸೆಗಳು ನಿಧಾನವಾಗಿ ಚಿಗುರತೊಡಗಿದವು. ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದಿದ್ದ ನಾನು, ನನ್ನ ಓದಿಗೆ ಸೂಕ್ತವಾದ ಉದ್ಯೋಗ ಪಡೆಯದೆ ಅನಿವಾರ್ಯವಾಗಿ ಪೊಲೀಸ್ ಇಲಾಖೆಗೆ ಸೇರಬೇಕಾಯಿತು. ನಾನು ಕೆಲಸಕ್ಕೆ ಸೇರಿದ ಕೆಲವೇ ತಿಂಗಳುಗಳ ನಂತರ ಅಮ್ಮನೂ ಅಪ್ಪನ ದಾರಿ ಹಿಡಿದಳು. ಈಗ ನನ್ನಲ್ಲಿ ಆಯ್ಕೆಯ ಯಾವುದೇ ಗೊಂದಲಗಳು ಇರಲಿಲ್ಲ. ಹೊರಜಗತ್ತಿನೊಂದಿಗೆ ಹೇಗೆ ಮಾತನಾಡಬೇಕು ಎಂಬುದನ್ನು ಅನುಭವದಿಂದ ಕಲಿತಿದ್ದೆ. ಇನ್ನೊಂದು ಮದುವೆಯಾಗಿ ಗಂಡಿನ ಕ್ರೌರ್ಯಕ್ಕೆ ದೇಹವನ್ನು ಒಪ್ಪಿಸುವುದು ಬೇಡವೆಂದು ನಿರ್ಧರಿಸಿ, ಒಂಟಿಯಾಗಿಯೇ ಬದುಕಲು ನಿರ್ಧಾರ ಮಾಡಿದೆ. ಈಗ ನನಗೆ ಯಾರ ಬಂಧನವೂ ಇಲ್ಲ!



ನಾನು ಪೊಲೀಸ್ ಇಲಾಖೆಗೆ ಸೇರಿದ ಹೊಸತರಲ್ಲಿ, ಅಲ್ಲಿದ್ದ ನನ್ನ ಮೇಲಾಧಿಕಾರಿಗಳ ಕಣ್ಣು ಗಂಡ ತೊರೆದ ನನ್ನ ಹೆಣ್ತನದ ಮೇಲೆ ಬಿದ್ದಿತು. ಅವರ ಕಿರುಕುಳಗಳು ಹೆಚ್ಚಾಗತೊಡಗಿದವು. ಕುಂತಲ್ಲಿ, ನಿಂತಲ್ಲಿ ಅವರು ನನ್ನನ್ನು ತಮ್ಮ ಕಣ್ಣುಗಳಿಂದಲೇ ಭೋಗಿಸತೊಡಗಿದರು. ತುಚ್ಛವಾಗಿ ಮಾತಾಡತೊಡಗಿದರು. ಅವರ ಮಾತುಗಳಲ್ಲಿ ಅಡಗಿದ್ದ ವಿಕೃತ ಬಯಕೆಗಳ ಅರಿವಿದ್ದೂ ನಾನು ಮೌನವಾಗಿ ಕರ್ತವ್ಯದಲ್ಲಿ ನಿರತಳಾದೆ. ಒಂದು ದಿನ ಮೇಲಾಧಿಕಾರಿಯೊಬ್ಬ ಲಜ್ಜೆ ಬಿಟ್ಟು ನನ್ನನ್ನು ಭೋಗಿಸಲು ಬಂದ. ಅದುವರೆಗೂ ಹೇಗೋ ಸಹಿಸಿಕೊಂಡಿದ್ದ ನಾನು ಇನ್ನು ಸುಮ್ಮನಿರಬಾರದು ಎಂದು ಸೆಟೆದುನಿಂತು 'ಮಗನೆ ಬಾರೋ..' ಎಂದು ಆರ್ಭಟಿಸಿ ಅವನ ಮುಂದೆ ನನ್ನ ಯೂನಿಫಾರಂ ಬಟ್ಟೆಗಳನ್ನು ಕಳಚಿ ಬೆತ್ತಲಾಗಿ ನಿಂತೆ. ಅಲ್ಲಿದ್ದ ಇತರ ಪೋಲೀಸರು ಇದನ್ನೆಲ್ಲಾ ನಿರೀಕ್ಷಿಸಿರಲಿಲ್ಲ! ಅವರು ದಿಗ್ಭ್ರಮೆಗೊಂಡು ಭಯದಿಂದ ಕಣ್ಣುಮುಚ್ಚಿ ನಿಂತರು. ನಾನು ನಗ್ನವಾಗಿ ಅವನ ಮುಂದೆ ನಿಂತಾಗ ಯಾವ ಭೋಗಾಸಕ್ತಿಯೂ ಅವನ ದೇಹದಲ್ಲಿ ಉಳಿದಿರಲಿಲ್ಲ! ಅವನ ಕಣ್ಣುಗಳು ಅವಮಾನವನ್ನು ತಾಳಲಾರದೆ ನೆಲ ನೋಡತೊಡಗಿದವು. ಗಂಡಸರು ಹೆಣ್ಣಿನ ನಗ್ನ ದೇಹಕ್ಕಿಂತ ಬಟ್ಟೆತೊಟ್ಟ ಅವಳ ದೇಹಕ್ಕೆ ಹಾತೊರೆಯುತ್ತಾರೆ ಎನ್ನುವುದು ಮನದಟ್ಟಾಯಿತು. ಅವನ ದೇಹ ಸಾವಿರ ಚೂರುಗಳಾಗಿ ಸ್ಫೋಟಗೊಂಡಿತು. ಆ ಕ್ಷಣಕ್ಕೆ ನನ್ನ ತುಟಿಗಳ ಮೇಲೆ ವಿಜಯ ಸಾಧಿಸಿದ ಮುಗುಳುನಗೆಯೊಂದು ಮೂಡಿತು. ನಂತರ ಅವನು ನನ್ನನ್ನು ಎದುರಿಸಲಾರದೆ ಕೆಲವೇ ದಿನಗಳಲ್ಲಿ ಆ ಸ್ಟೇಷನ್‌ನಿಂದ ವರ್ಗಾವಣೆ ಮಾಡಿಸಿಕೊಂಡು ಹೊರಟುಹೋದ. ಇದಾದ ಕೆಲವೇ ತಿಂಗಳಲ್ಲಿ ಅವನು ಆತ್ಮಹತ್ಯೆ ಮಾಡಿಕೊಂಡ ಎಂಬ ಸುದ್ದಿ ನನ್ನ ಸ್ಟೇಷನ್ನಿಗೆ ಬಂದಿತು.

ನಾನು ಪೊಲೀಸ್ ಅಧಿಕಾರಿಯೊಂದಿಗೆ ನಡೆದುಕೊಂಡ ರೀತಿ ನನ್ನ ಇಲಾಖೆಯಲ್ಲಿ ಮನೆಮಾತಾಗಿತ್ತು! ಇದರಿಂದಾಗಿ ಮುಂದೆ ಯಾರೂ